**ಸಾಕ್ಷಿಯನ್ನು ದಿನಾಂಕ 16.07.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ಶ್ರೀ. ಹೆಚ್ ಕೆ ಪಿ / ಎಮ್ ಜಿ ಆರ್ ವಕೀಲರಿಂದಃ**

ನಾನು ಹತ್ತನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ನನ್ನ ಮುಖ್ಯ ವಿಚಾರಣೆ ಬದಲಾಗಿ ಸಲ್ಲಿಸಿದ ಪ್ರಮಾಣ ಪತ್ರದ ಅಂಶಗಳನ್ನು ನಾನೇ ವಕೀಲರಿಗೆ ಹೇಳಿ ಬರೆಸಿರುತ್ತೇನೆ. ವಾದಿಯು ಈ ದಾವೆಯನ್ನು ದಾವಾ ಆಸ್ತಿಗೆ ಸಂಬಂಧಿಸಿದಂತೆ ಭಾಗಾಂಶ ಕೋರಿ ಹೂಡಿರುತ್ತಾರೆ.

ನಮ್ಮ ತಂದೆ ತಾಯಿಗೆ ನಾನು ವಾದಿ ಹಾಗೂ 3 ನೇ ಪ್ರತಿವಾದಿ ಸೇರಿ ಮೂರು ಜನ ಮಕ್ಕಳು ಎಂದರೆ ಸರಿ. ನಾವು ಎಲ್ಲರೂ ಒಟ್ಟು ಕುಟುಂಬದಲ್ಲಿ ವಾಸ ಮಾಡುತ್ತಿದ್ದೇವೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಹಿಂದೆಯೇ ಬೇರೆ ಬೇರೆಯಾಗಿರುತ್ತೇವೆಂದು ನುಡಿಯುತ್ತಾರೆ. ದಿನಾಂಕ 22.02.1996 ರಂದು ದಾವಾ ಆಸ್ತಿಯನ್ನು ನಮ್ಮ ತಾಯಿಯಾದ ಮೃತ 1 ನೇ ಪ್ರತಿವಾದಿ ಹೆಸರಿನಲ್ಲಿ ಕ್ರಯಕ್ಕೆ ತೆಗೆದುಕೊಂಡಿರುತ್ತೇವೆ ಎಂದರೆ ಸಾಕ್ಷಿಯು ನಮ್ಮ ತಾಯಿ ಸ್ವಯಾರ್ಜಿತವಾಗಿ ಕ್ರಯಕ್ಕೆ ಪಡೆದ ಆಸ್ತಿಯಾಗಿರುತ್ತದೆ ಎಂದು ನುಡಿಯುತ್ತಾರೆ. ಸದರಿ ದಾವಾ ಆಸ್ತಿಯನ್ನು ಒಟ್ಟು ಕುಟುಂಬದಲ್ಲಿರುವಾಗ ಎಲ್ಲರೂ ಸೇರಿ ನಮ್ಮ ತಾಯಿಯ ಹೆಸರಿನಲ್ಲಿ ಖರೀದಿಸಿದ್ದಾಗ್ಯೂ ಸಹ ನಾನು ಅದು ಅವರ ಸ್ವಯಾರ್ಜಿತ ಆಸ್ತಿ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ದಾವೆ ಹೂಡುವ ಅವಧಿಯಲ್ಲಿ ನಮ್ಮ ತಂದೆ ತಾಯಿಗೆ ಆರೋಗ್ಯ ಸರಿಯಿರಲಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಅವರ ಯೋಗಕ್ಷೇಮವನ್ನು ನಾನೇ ನೋಡಿಕೊಳ್ಳುತ್ತಿದ್ದೆ ಎಂದು ನುಡಿಯುತ್ತಾರೆ. ಅವರಿಬ್ಬರ ಆರೋಗ್ಯವನ್ನು ವಾದಿಯೇ ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ.

ನಾನು ತಮಿಳುನಾಡಿನಲ್ಲಿ ವಾಸವಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾನು ಹೆಚ್ ಡಿ ಕೋಟೆಯಲ್ಲಿ ವಾಸವಿರುತ್ತೇನೆಂದು ನುಡಿಯುತ್ತಾರೆ. ಹೆಚ್ ಡಿ ಕೋಟೆಯ ದಾವಾ ಆಸ್ತಿಯಲ್ಲಿರುವ ಮನೆಯಲ್ಲಿ ವಾದಿ ಹಾಗೂ ಅವರ ತಂದೆ ತಾಯಿ ವಾಸವಿದ್ದು ಅವರ ಯೋಗಕ್ಷೇಮವನ್ನು ವಾದಿಯೇ ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾನು ಹಾಗೂ ನನ್ನ ತಂದೆ ತಾಯಿ ವಾಸವಿದ್ದೇವು, ಈಗ ತಾಯಿಮೃತಪಟ್ಟಿರುತ್ತಾರೆ ಎಂದು ನುಡಿಯುತ್ತಾರೆ.

ದಿನಾಂಕ 20.02.2023 ರಂದು ನಾನು ನನ್ನ ತಾಯಿಗೆ ವಾಸ್ತವ ಅಂಶವನ್ನು ಮರೆಮಾಚಿ ಅವರಿಂದ ದಾನಪತ್ರವನ್ನು ಸೃಷ್ಟಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಅವರ ಆರೋಗ್ಯವನ್ನು ನಾನೇ ನೋಡಿಕೊಳ್ಳುತ್ತಿದ್ದು ಅವರು ಸ್ವಇಚ್ಛೆಯಿಂದ ದಾನಪತ್ರವನ್ನು

ಬರೆದುಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ನನ್ನ ತಂದೆ ತಾಯಿಗೆ ನಾನೇ ಹಿರಿಯ ಮಗನಾದ್ದರಿಂದ ಎಲ್ಲ ವ್ಯವಹಾರವನ್ನು ನಾನೇ ನೋಡಿಕೊಳ್ಳುತ್ತಿದ್ದೇ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನ್ನ ತಂದೆ ಹಾಗೂ ನಾನು ಸೇರಿ ನೋಡಿಕೊಳ್ಳುತ್ತಿದ್ದೇವು ಎಂದು ನುಡಿಯುತ್ತಾರೆ. ನಮ್ಮ ತಾಯಿ ಮೃತಪಡುವವರೆಗೆ ವಾದಿಯೇ ನಮ್ಮ ತಾಯಿಯ ಯೋಗಕ್ಷೇಮವನ್ನು ನೋಡಿಕೊಂಡಿದ್ದು ದಾವಾ ಆಸ್ತಿಯನ್ನು ಲಪಟಾಯಿಸುವ ಉದ್ದೇಶದಿಂದ ಸುಳ್ಳು ದಾನಪತ್ರವನ್ನು ಸೃಷ್ಟಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಈ ದಾವೆಯನ್ನು ಹೂಡಿದ ನಂತರ ದಾನಪತ್ರ ನಿಡಿ-4 ರ ದಾನಪತ್ರವನ್ನು ಬರೆಸಿಕೊಂಡಿರುತ್ತೇನೆ ಎಂದರೆ ಸಾಕ್ಷಿ ನನ್ನ ತಾಯಿಗೆ ಆರೋಗ್ಯ ಸಮಸ್ಯೆ ಹೆಚ್ಚಾದುದ್ದರಿಂದ ಅವರು ದಾನಪತ್ರ ಬರೆದುಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಯು ಒಟ್ಟು ಕುಟುಂಬದ ಆಸ್ತಿಯಾಗಿದ್ದು ವಾದಿಯು ಅದರಲ್ಲಿ ಸಮಾನ ಭಾಗಾಂಶದ ಹಕ್ಕು ಇರುತ್ತದೆ ಎಂದರೆ ಸರಿಯಲ್ಲ. ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ: ಇಲ್ಲ.**

(**ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**)

**ಓ ಹೇ ಕೇ ಸಾ ಸ ಇ ಒ.,**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ಹೆಗ್ಗಡದೇವನಕೋಟೆ.**